ಪ್ರಜಾವಾಣಿ

Saturday, October 15, 2011

*ದಕ್ಷಿಣ ವಲಯ ಅಂತರ ವಿವಿ ಮಹಿಳಾ ಟೆನಿಸ್ ಟೂರ್ನಿ*

# ಸೆಮಿಫೈನಲ್‌ಗೆ ಜೈನ್ ವಿವಿ

**ಪ್ರಜಾವಾಣಿ ವಾರ್ತೆ**

**ಬೆಳಗಾವಿ:** ಬೆಂಗಳೂರಿನ ಜೈನ್ ವಿವಿ, ಚೆನ್ನೈನ ಮದ್ರಾಸ್ ವಿವಿ ಹಾಗೂ ಕಟ್ಟಂಕುಲತ್ತೂರಿನ ಎಸ್‌ಆರ್‌ಎಂ ವಿವಿ ತಂಡಗಳು ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ 'ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಟೆನಿಸ್ ಟೂರ್ನಿ'ಯ ಸೆಮಿ ಫೈನಲ್ ತಲುಪಿವೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಚೆನ್ನೈನ ಮದ್ರಾಸ್ ವಿವಿ ತಂಡವು 2–0 ಅಂತರದಿಂದ ಮೈಸೂರು ವಿವಿ ತಂಡವನ್ನು ಸೋಲಿಸಿದೆ. ಸಿಂಗಲ್ಸ್ ವಿಭಾಗದಲ್ಲಿ ಮದ್ರಾಸ್ ವಿವಿಯ ಆರ್. ಭವಾನಿ 6–1, 6–1 ರಿಂದ ಮೈಸೂರು ವಿವಿಯ ಕವಿತಾ ಆರ್.ಎಸ್ ವಿರುದ್ಧ ಗೆಲುವು ಪಡೆದರೆ, ಡಬಲ್ಸ್ ವಿಭಾಗದಲ್ಲಿ ಸುಮಲ್ಯಾ ಹಾಗೂ ಮಾಯಾ ಜೋಡಿ 6–1, 6–4ರಿಂದ ಕವಿತಾ ಹಾಗೂ ರಾಗಿಣಿ ಜೋಡಿ ವಿರುದ್ಧ ಜಯ ಗಳಿಸಿದೆ.

ಬೆಂಗಳೂರಿನ ಜೈನ್ ವಿವಿ ತಂಡವು 2–0 ಅಂತರದಿಂದ ಹೈದರಾಬಾದ್‌ನ ಉಸ್ಮಾನಿಯ ವಿವಿ ತಂಡವನ್ನು ಸೋಲಿಸಿದೆ. ಸಿಂಗಲ್ಸ್ ವಿಭಾಗದಲ್ಲಿ ಶಲಾಕಾ ಯು 6–3, 6–1 ರಿಂದ ಸುಷ್ಮಾ ವಿರುದ್ಧ, ಡಬಲ್ಸ್ ವಿಭಾಗದಲ್ಲಿ ಪ್ರಾರ್ಥನಾ ಹಾಗೂ ಪ್ರೇರಣಾ ಜೋಡಿ 6–1, 6–2 ರಿಂದ ಸುಷ್ಮಾ ಹಾಗೂ ಶ್ವೇತಾ ಜೋಡಿ ವಿರುದ್ಧ ಗೆಲುವು ಸಾಧಿಸಿದೆ.

ಕಟ್ಟಂಕುಲತ್ತೂರಿನ ಎಸ್‌ಆರ್‌ಎಂ ವಿವಿ ತಂಡವು 2–1 ಅಂತರದಿಂದ ಕಾಕಿನಾಡಾದ ಜೆಎನ್‌ಟಿ ವಿವಿ ತಂಡವನ್ನು ಪರಾಭವಗೊಳಿಸಿತು. ಸಿಂಗಲ್ಸ್ ವಿಭಾಗದಲ್ಲಿ ಕಟ್ಟಂಕುಲತ್ತೂರಿನ ಎಸ್‌ಆರ್‌ಎಂ ವಿವಿಯ ಸಂಗೀತಾ ಕೆ.ಎಸ್. 6–1, 6–2 ರಿಂದ ಪ್ರಿಯಾ ವಿರುದ್ಧ ಜಯಿಸಿದರೆ, ಡಬಲ್ಸ್ ವಿಭಾಗದಲ್ಲಿ ಲೀಜಾ ಹಾಗೂ ಚಿತ್ರಾ ಜೋಡಿ 1–6, 6–2, 6–4 ರಿಂದ ಪ್ರಿಯಾ ಹಾಗೂ ಶ್ರೇಯಾನಾ ವಿರುದ್ಧ ಗೆಲುವು ಪಡೆಯಿತು.